


## ನಕ್ಕು ಬಿಡಿ



ಪುಟ್ಟ: ಅಪ್ಪ, ಮೂರ್ಖ ಅಂದ್ರೆ ಯಾರು?

ಅಪ್ಪ: ಯಾರು ಸರಳವಾಗಿ ಹೇಳೋದನ್ನು ತುಂಬಾ ಕ್ಲಿಷ್ಟವಾದ ಪದಗಳಿಂದ, ಉದ್ದುದ್ದ ವಾಕ್ಯಗಳಿಂದ ಒಂದಕ್ಕೊಂದು ಸಂಬಂಧವೇ ಇಲ್ಲದ ಪದಗಳಿಂದ ಹೇಳಿ ಕೇಳೋರನ್ನು ಗೊಂದಲಕ್ಕೀಡು ಮಾಡಿ ಇವರನ್ನು ಯಾಕಪ್ಪಾ ಕೇಳಿದೆ ಅನಿಸಿ ಬಿಡುತ್ತಾನೋ ಅವನು. ಅರ್ಥವಾಯಿತಾ?

ಪುಟ್ಟ: ಇಲ್ಲ!

★★★

ಗುಂಡ ಸತ್ತ ಆನೆಯ ಪಕ್ಕ ಕೂತು ಅಳುತ್ತಿದ್ದ.

ದಾರಿಹೋಕ: ಯಾಕಯ್ಯಾ, ಹೀಗೆ ಅಳ್ತಿದೀಯ?

ಗುಂಡ: ನನ್ನ ಆನೆ ಸತ್ತು ಹೋಗಿದೆ.

ದಾರಿಹೋಕ: ಅತ್ತರೆ ಸತ್ತಿರೋ ಆನೆ ಬದುಕಿ ಬರುತ್ತಾ?

ಗುಂಡ: ಇಲ್ಲ. ಆದ್ರೆ ಅದಕ್ಕೆ ಗುಂಡಿ ತೋಡಬೇಕಾಗಿರೋದು ನಾನೇ!



★★★

ಟೀಚರ್ ಕ್ಲಾಸ್ ರೂಮಿಗೆ ಬಂದಾಗ ಇಬ್ಬರು ಹುಡುಗರು ವಾದ ಮಾಡುತ್ತಿದ್ದರು.

ಟೀಚರ್: ಯಾಕೆ ವಾದ ಮಾಡ್ತಾ ಇದೀರ?

ಹುಡುಗ: ಟೀಚರ್, ನನಗೆ ಹತ್ತು ರೂಪಾಯಿ ನೋಟು ಸಿಕ್ಕಿತು. ಅದನ್ನು ಯಾರು ಚೆನ್ನಾಗಿ ಸುಳ್ಳು ಹೇಳುತ್ತಾರೋ ಅವರಿಗೆ ಕೊಡ್ತೀನಿ ಅಂದ್ರೆ ಇವನು ಬೇಡ ಅಂತಿದಾನೆ..

ಟೀಚರ್: ನಿಮಗೆ ನಾಚಿಕೆ ಆಗಬೇಕು, ನನಗೆ ನಿಮ್ಮ ವಯಸ್ಸಿನಲ್ಲಿ ಸುಳ್ಳು ಅಂದರೇನೆಂದೇ ಗೊತ್ತಿರಲಿಲ್ಲ!

ಹುಡುಗ: ಟೀಚರ್ ಈ ಹತ್ತು ರೂಪಾಯಿ ನಿಮಗೇ!

★★★

ಟೀಚರ್ ವಿದ್ಯಾರ್ಥಿಗೆ 'ಬೋರ್ಡ್ ಮೇಲೆ 55 ಬರಿ' ಎಂದರು.

ವಿದ್ಯಾರ್ಥಿ : ಹೇಗೆ ಬರೆಯೋದು ಮೇಡಂ?

ಟೀಚರ್: ಮೊದಲು 5 ಬರಿ, ಆಮೇಲೆ ಪಕ್ಕದಲ್ಲಿ ಇನ್ನೊಂದು ಐದು ಬರಿ.

ಹುಡುಗ 5 ಬರೆದು ನಿಲ್ಲಿಸಿಬಿಟ್ಟ!

ಟೀಚರ್: ಯಾಕೋ ಬರೆಯೋದು ನಿಲ್ಲಿಸಿಬಿಟ್ಟೆ?

ಹುಡುಗ: ಇನ್ನೊಂದು 5 ಈ ಪಕ್ಕ ಬರೀಬೇಕೋ, ಆ ಪಕ್ಕ ಬರೀಬೇಕೋ ಗೊತ್ತಾಗ್ತಿಲ್ಲ ಮೇಡಂ!

★ ಸುಕೇಶವ